ಈ) ಯಾವುದೇ ಅವ್ಯವಸ್ಥಿತವಾಗಿ ನಡೆದಿರುವ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಉ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾಲೂರು ನಗರದಲ್ಲಿ ಪ್ರಥಮ ದರ್ಜೆ ಮಹಾವಿದ್ಯಾಲಯ ಸ್ಥಾಪನೆ ಬಗ್ಗೆ

೮೮೫ ಶ್ರೀ ಹೆಚ್.ಬಿ. ದ್ಯಾವೀರಪ್ಪ (ಮಾಲೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಲೂರು ನಗರದಲ್ಲಿ ಪ್ರಥಮ ದರ್ಜೆ ಮಹಾವಿದ್ಯಾಲಯ ಆಗಬೇಕೆಂದು ನಾಲ್ಕಾರು ವರ್ಷಗಳಿಂದ ಒತ್ತಡವಿದ್ದ ಹಿಂದಿನ ವರ್ಷದ ಶಾಸನ ಸಭೆಯಲ್ಲಿ ಈ ಬಗ್ಗೆ ಸರ್ಕಾರದವರ ಗಮನವನ್ನು ಸೆಳೆದಾಗ ಈ ವರ್ಷ ಸದರಿ ಕಾಲೇಜುಗಳನ್ನು ಮಂಜೂರು ಮಾಡುವುದಾಗಿ ಭರವಸೆ ಕೊಟ್ಟಿದ್ದು ನಿಜವಲ್ಲವೆ ?

ಆ) ಹಿಂದಿನ ವರ್ಷ ಮತ್ತು ಈ ವರ್ಷವೂ ಸಹ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಮತ್ತು ಮಾಹಿತಿಯಿಂದ ಇಂತಹ ವಿದ್ಯಾಲಯ ಅತ್ಯವಶ್ಯಕವೆಂದು ವರದಿ ಸಲ್ಲಿಸಿಲ್ಲವೆ, ಈ ಸ್ಥಳೀಯ ಪ್ರಮುಖರು ಹಾಲಿ ಕಾಲೇಜನ್ನು ನಡೆಸಲು ಅವಶ್ಯಕವಾಗಿ ಕಡಿಮೆಬರುವ ಕಟ್ಟಡವನ್ನು ಕಟ್ಟಲು ಮುಂದೆ ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ತಾಲ್ಲೂಕಿನ ನೂರಾರು ಜನ ವಿದ್ಯಾರ್ಥಿಗಳು ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಅಭ್ಯಾಸ ಮಾಡಲು ಬೆಂಗಳೂರು, ಕೋಲಾರ ಕೆಜಿಎಫ್ ಮಗೈರೆ ಪರದಾಡುವ ತೊಂದರೆಯನ್ನು ತಪ್ಪಿಸಿ ೧೯೬೭-೬೮ ವರ್ಷದಿಂದ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಮಾಲೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ಮನವಿ ಬಂದಿತ್ತು. ೧೯೬೬-೬೭ರ ಸಾಲಿನಲ್ಲಿ ಯಾವುದೇ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರು ನೀಡಬಾರದೆಂದು ಸರ್ಕಾರವು ನಿರ್ಧರಿಸಿದ್ದುದ್ದರಿಂದ, ಮಂಜೂರಾತಿ ನೀಡಲು ಸಾಧ್ಯವಾಗಲಿಲ್ಲ.

ಆ) ಇಲಾಖೆಯಿಂದ ವರದಿ ಬಂದಿದೆ, ಕಟ್ಟಡ ನಿರ್ಮಿಸಲು ಸಾರ್ವಜನಿಕರು ಮುಂದೆ ಬಂದಿರುವುದೂ ಸರ್ಕಾರದ ಗಮನಕ್ಕೆ ಬಂದಿದೆ.

ಇ) ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದಾಗಿ ೧೯೬೭-೬೮ರ ಸಾಲಿನಲ್ಲೂ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾತಿ ನೀಡಬಾರದೆಂದು ಸರ್ಕಾರವು ನಿರ್ಧರಿಸಿದೆ.

ಬನ್ನೂರಿನ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ

೧೨೭೫ ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ವಿದ್ಯಾಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸಿಪುರ ತಾಲ್ಲೂಕು ಬನ್ನೂರಿನ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಎಸ್ ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮೋಸದಿಂದ ಪಾಸು ಮಾಡಿಸುವ ಗುಂಪೊಂದು ಇರುವುದು ಸರ್ಕಾರದ ಗಮನದಲ್ಲಿದೆಯೆ ?

ಆ) ಪಾಸು ಮಾಡಿಸಲು ವಿದ್ಯಾರ್ಥಿಗಳಿಂದ ಹಣ ಸುಲಿಗೆ ಮಾಡುತ್ತಿರುವುದು ತಿಳಿದಿದೆಯೇ?

ಇ) ಕಾಪಿ ಮಾಡಿಸಿ ಮೋಸದಿಂದ ಪಾಸಾದ ವಿದ್ಯಾರ್ಥಿಗಳಿಂದ ನ್ಯಾಯವಾಗಿ ಓದಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೆ?

ಈ) ಸದರಿ ಕಾಲೇಜಿನ ಸಿಬ್ಬಂದಿ ವರ್ಗದವರೂ ಈ ಮೋಸದ ಜಾಲದಲ್ಲಿರುವುದು ನಿಜವೆ?

ಉ) ಹಾಗಿದ್ದಲ್ಲಿ ಇವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).--

ಅ) ಇಲ್ಲ

ಆ) ಇಲ್ಲ

ಇ) (ಈ) (ಉ) ಮೇಲಿನ ಉತ್ತರಗಳಿಂದ ಈ ಪ್ರಶ್ನೆಗಳಿಂದ ಉದ್ಭವಿಸುವುದಿಲ್ಲ.

ರಾಣೆಬೆನ್ನೂರು ತಾಲ್ಲೂಕಿನಲ್ಲಿ ೧೯೮೬-೮೭ನೇ ಸಾಲಿನಲ್ಲಿ ಅಂದಾಜು ಪತ್ರಿಕೆಯ ಬಗ್ಗೆ

೮೫೪ ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).--ಮಾನ್ಯ ಲೋಕೋಪಯೋಗಿ, ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣೆಬೆನ್ನೂರ ತಾಲ್ಲೂಕಿನಲ್ಲಿ ೧೯೮೬-೮೭ನೇ ಸಾಲಿನಲ್ಲಿ ಅಂದಾಜು ಪತ್ರಿಕೆಯಲ್ಲಿ ಎಷ್ಟು ಡಾಂಬರೀಕರಣ ರಸ್ತೆಗಳನ್ನು ಸೂಚಿಸಲಾಗಿದೆ ಅವು ಯಾವುವು ?

ಆ) ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ ? ಇಲ್ಲವಾದರೆ ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).--

ಅ) ಎರಡು ರಸ್ತೆಗಳು.

	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
೧) ರಾಣೆಬೆನ್ನೂರಿಂದ ಬ್ಯಾಡಗಿ ರಸ್ತೆ ಹೂಳಿಹಳ್ಳಿ ಮಾರ್ಗವಾಗಿ ಆಯ್ದ ಭಾಗಗಳಲ್ಲಿ ಡಾಂಬರ್ ಮಾಡುವುದು.	೩.೦೦
೨) ರಾಣೆಬೆನ್ನೂರು ಮೆಡ್ಲೇರಿ ರಸ್ತೆಯ ಆಯ್ದ ಭಾಗಗಳಲ್ಲಿ ಡಾಂಬರ್ ಮಾಡುವುದು.	೩,೫೦

ಬ) ಒಂದನೇ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಇನ್ನೊಂದು ಕಾಮಗಾರಿಯನ್ನು ಬೇಗನೆ ಪ್ರಾರಂಭಿಸಲಾಗುವುದು.

ಉರ್ದು ನಿರ್ದೇಶನಾಲಯ ಸ್ಥಾಪಿಸುವ ಬಗ್ಗೆ

೧೩೦೩. ಶ್ರೀ ಮೊಹಮದ್ ಲಯಂಕುದ್ದೀನ್ (ಬೀದರ್).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರತ್ಯೇಕ ಉರ್ದು ನಿರ್ದೇಶನಾಲಯ ಸ್ಥಾಪಿಸಲು ಸರ್ಕಾರ ಭರವಸೆ ನೀಡಿರುವುದು ನಿಜವಲ್ಲವೆ; ಹಾಗಿದ್ದಲ್ಲಿ ಎಂದು ಸ್ಥಾಪಿಸಲಾಯಿತು.

ಆ) ನಿರ್ದೇಶನಾಲಯಕ್ಕೆ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯನ್ನು ಒದಗಿಸಲಾಗಿದೆಯೆ ?

ಇ) ನಿರ್ದೇಶನಾಲಯದ ಕಾರ್ಯಕ್ರಮಗಳೇನು ?

ಈ) ನಿರ್ದೇಶನಾಲಯದ ವ್ಯಾಪ್ತಿಗೆ ಬರುವ ಉರ್ದು ಶಾಲೆಗಳನ್ನು ನೋಡಿಕೊಳ್ಳಲು ಜಿಲ್ಲಾ ಮಟ್ಟದಲ್ಲಿ ವ್ಯವಸ್ಥೆ ಮಾಡಲಾಗಿದೆಯೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಹೌದು. ೧೯೮೭-೮೮ರಲ್ಲಿ ಸ್ಥಾಪಿಸಲಾಗುವುದು.

ಆ) ಅಂತಿಮ ರೂಪರೇಷೆಗಳನ್ನು ಸಿದ್ಧಗೊಳಿಸಲಾಗುತ್ತಿದೆ.